# NEW HORIZON COLLEGE

Affiliated to Bangalore University, Recognized by Govt. of Karnataka
Recognized under section 2(f) of the UGC Act. 1956
3rd 'A' Cross 2nd 'A' Main, Kasturinagar, Bengaluru- 560043

# ICON - 2018



# INTERNATIONAL CONFERENCE PROCEEDINGS

16th October 2018

www.newhorizonindia.edu

# 'ಕನ್ನಡ ಸಾಹಿತ್ಯದಲ್ಲಿ ದೇಶಿಯತೆ ಹಾಗೂ ಜಾಗತೀಕರಣ'

ಪ್ರೊ, ಪಾತಯ್ಯ.ಎನ್

ಜಾಗತೀಕರಣ ಭರಾಟೆಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನುದೇಶ ವಿದೇಶ ಮಟ್ಟದಲ್ಲಿ ಮಾನ್ಯತೆಗೊಳಿಸುವುದು ನಮ್ಮೆಲ್ಲರಜವಾಬ್ದಾರಿಯಾಗಿದೆ. ನಮ್ಮ ದೇಶ ಭಾಷೆ ಕನ್ನಡ ಕೊಚ್ಚಿ ಹೋಗದಂತೆ ಎಚ್ಚರಿಕೆಗಳನ್ನು ನಾವು ನಿರ್ವಹಿಸಬೇಕಾಗಿದೆ. ಇಂದು ಕನ್ನಡ ಭಾಷೆ ಸಾಹಿತ್ಯದ ಹಿರಿಮೆಯನ್ನು ನಾವು ಕರ್ನಾಟಕದ ಗಡಿಯಾಚೆಗೂ ರಾಜ್ಯಗಳಿಗೂ, ದೇಶಗಳಿಗೂ ಹಾಗೂ ವಿದೇಶಗಳಿಗೂ ಪಸರಿಸುವಂತೆ ಮಾಡಬೇಕಾಗಿದೆ. ಇಂಥ ನಮ್ಮ ಕನ್ನಡಿಗರ ನಾಡು–ನುಡಿ ಪ್ರೇಮದಿಂದ ಇಂದು ಇಂಗ್ಲೆಂಡಿನಲ್ಲಿ ಬಸವಣ್ಣನವರ ಪುತ್ಥಳಿ ರೂಪುಗೊಳ್ಳಲು ಸಾಧ್ಯವಾಗಿದೆ.

ದೇಶಿಯವಾಗಿ ತನ್ನ ಭಾಷೆ ಸಂಸ್ಕೃತಿಯನ್ನು ಹೇಗೆ ರಚಿಸಲು ಸಾಧ್ಯವಿದೆಯೊ. ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ನಾಡಿನ ಸಾಹಿತ್ಯ ಸಂಸ್ಕೃತಿ ನಾಡು–ನುಡಿ ಹಾಗೂ ಭಾಷೆಯನ್ನು ರಕ್ಷಿಸಲು ಹೇಗೆ ಸಾಧ್ಯವಿದೆಯೆಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಆದರೆ ಅದನ್ನು ಅಲ್ಲಿ ಹೇಗೆ ರಕ್ಷಿಸಬೇಕು ಮತ್ತು ಹೇಗೆ ಬೆಳಸಬೇಕು ಎಂಬ ಇಚ್ಛಾಶಕ್ತಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರಬೇಕು. ಉದಾ:–ಅಕ್ಕ ಎಂಬ ಅಮೇರಿಕ ಕನ್ನಡ ಬಳಗ ಇಂದಿಗೂ ಸಹ ನಮ್ಮ ನಾಡಿನ ಭಾಷೆ, ನಾಡು–ನುಡಿ, ಸಂಸ್ಕೃತಿ ಇವುಗಳನ್ನು ವಿದೇಶಗಳಲ್ಲೂ ಮಿಂಚುವಂತೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ.

ಜಾಗತೀಕರಣವು ಇಂದಿನ ಆಧುನಿಕ ಯುಗದಲ್ಲಿ ಎಲ್ಲವನ್ನು ಪಕ್ಕಾ ಲೆಕ್ಕಾಚಾರ ಮತ್ತು ವ್ಯವಹಾರದಿಂದ ಕೂಡಿದ ನಮ್ಮ ಜೀವನ ಹೊಸ ರೀತಿಯ ಸಂವೇದನೆಗಳಿಗೆ ಮುಖಾ ಮುಖಿಯಾಗಬೇಕಾಗಿದೆ. ಜಾಗತೀಕರಣ ಸಾಹಿತ್ಯ, ಸಾಂಸ್ಕೃತಿಕ ಶೈಕ್ಷಣಿಕ ಹಾಗು ಸಾಮಾಜಿಕ ಈ ಎಲ್ಲಾ ವಲಯಗಳಲ್ಲಿ ಉಂಟು ಮಾಡುತ್ತಿರುವ ಪರಿಣಾಮ ಮತ್ತು ಒಡ್ಡುತ್ತಿರುವ ಸವಾಲುಗಳಿಗೆ ನಾವು ಇಂದು ಉತ್ತರ ಕಂಡು ಕೊಳ್ಳಬೇಕಾಗಿದೆ. ಜನರ ಜೀವನದ ಪ್ರತಿಬಿಂಬವಾಗಿ ಸಮಾಜದ ಕೈಕನ್ನಡಿಯಾಗಿ ಬರುವ ಸಾಹಿತ್ಯ ಕೂಡ ವಾಣಿಜ್ಯ ವ್ಯವಹಾರಗಳಿಗೆ ಇಂದು ಪ್ರತಿಸ್ಪಂದಿಸಬೇಕಾಗಿದೆ.

ಸಾಹಿತ್ಯ ಸಂಸ್ಕೃತಿಯ ಸಂದರ್ಭದಲ್ಲಿ ಯಾವುದು ಜಾಗತಿಕ ಮತ್ತು ಯಾವುದು ದೇಶೀಯತೆ ಎಂಬುದು ಸ್ಪಷ್ಟವಾಗಿ ವಿಂಗಡಿಸಿ ಹೇಳುವುದು ಬಹಳ ಕಷ್ಟದ ಕೆಲಸವೆ ಹಾಗಿದೆ. ಸಂಸ್ಕೃತಿ ಮೂಲತ: ಸ್ಥಳೀಯವಾದದ್ದು ಒಂದು ಪ್ರದೇಶದ ಭೌಗೋಳಿಕ ಹಿನ್ನೆಲೆಯಲ್ಲಿ ಅಲ್ಲಿನ ಜನಸಮುದಾಯ ಬಂದು ಕಟ್ಟಿಕೊಂಡ ವಿಶಿಷ್ಟವೆನ್ನಬಹುದಾದ ಜನಜೀವನ ವಿಧಾನದ ಕ್ರಮವೇ ಸಂಸ್ಕೃತಿ. ಆದರೆ ಚಲನಶೀಲತೆಯೇ. ಸಂಸ್ಕೃತಿಯ ಮೂಲಗುಣ. ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯೊಂದಿಗೆ ಆ ಇನ್ನೊಂದು ಸಂಸ್ಕೃತಿಯೊಂದಿಗೆ ಮತ್ತೊಂದು ಸಂಸ್ಕೃತಿಯೊಂದಿಗೆ ಆದ ಇನ್ನಾವುದೋ ಒಂದರೊಂದಿಗೆ ಸದಾ ಬೆರೆಯುತ್ತಾ ಘರ್ಷಣೆಗೊಳಗಾಗುತ್ತಾ ಕೊಂಡುಕೊಳ್ಳುವಿಕೆಯ ಪ್ರಕ್ರಿಯೆ ಆರಂಭವಾಗುತ್ತದೆ. ಲಕ್ಷಾಂತರ ವರ್ಷಗಳ ಹಿಂದೆ ಹುಟ್ಟಿಕೊಂಡ ಮಾನವ ಜನಾಂಗದ ಆದಿಮ ಸಂಸ್ಕೃತಿ ಹೇಗಿದ್ದಿರಬಹುದು ಎಂಬುದು ನಮ್ಮ ಊಹೆಗೂ ನಿಲುಕುವುದೇ ಕಷ್ಟ. ಮೂಲತ: ಅಲೆಮಾರಿಯಾಗಿದ್ದ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಸಾವಿರಾರು ಮೈಲುಗಳನ್ನು ನಡೆದು ಕ್ರಮಿಸಿ ಹೊಸ ಹೊಸ ನಾಡು ಜನಾಂಗಗಳೊಂದಿಗೆ ಮುಖಾ ಮುಖಿಯಾದ ಹೀಗೆ ಆರಂಭವಾದ ಈ ಮುಖಾಮುಖಿ ಹಡಗುಕಟ್ಟಿ ಖಂಡಾಂತರ ಪ್ರವಾಸ ಮಾಡಿ

*ಕನ್ನಡ ಸಹಾಯಕ ಪ್ರಾಧ್ಯಾಪಕರು,ಕೆ.ಎಲ್.ಇ. ಎಸ್.ನಿಜಲಿಂಗಪ್ಪ ಕಾಲೇಜು,ರಾಜಾಜಿನಗರ, ಬೆಂಗಳೂರು – 10